

# ಸಾಯೋ ಆಟ...

**ಕಥನಕ್ಕಿಂತ ಮೇಕಿಂಗ್‌ಗೆ ಹೆಚ್ಚು ಗಮನಹರಿಸಿ ಮಾಡಿದ 'ದ ಫ್ರೇ' ಕಿರುಚಿತ್ರದಲ್ಲಿ ಬಾಲಿವುಡ್‌ನ ಪ್ರಭಾವ ಎದ್ದು ಕಾಣುತ್ತದೆ.**

■ ಗೌರಿ

ಸಿನಿಮಾಗೆ ಹೋಲಿಸಿದರೆ ಕಿರುಚಿತ್ರದ ವ್ಯಾಪ್ತಿ ಚಿಕ್ಕದು. ಆ ಚಿಕ್ಕ ವ್ಯಾಪ್ತಿಯಲ್ಲಿಯೇ ಹೇಳಬೇಕಾಗಿರುವುದೆಲ್ಲವನ್ನೂ ಹೇಳಬೇಕಾದ ಅನಿವಾರ್ಯತೆ ನಿರ್ದೇಶಕನಿಗಿರುತ್ತದೆ. ಹಾಗಂತ ಎರಡು ಗಂಟೆಗಳಲ್ಲಿ ಹೇಳಬೇಕಾದ ಕಥೆಯನ್ನು ಇಪ್ಪತ್ತು ನಿಮಿಷದಲ್ಲಿ ಹೇಳಿಮುಗಿಸುವ ಧಾವಂತದಲ್ಲಿ ಎಲ್ಲವನ್ನೂ ಅಸ್ಪಷ್ಟಗೊಳಿಸಿ, ಅವಸರ ಮಾಡಿದರೂ ಕೃತಿ ವಿಫಲವಾಗುತ್ತದೆ. ಹಾಗಾಗಿ ಈ ಮಾಧ್ಯಮದ ವ್ಯಾಕರಣವನ್ನು ಮನಸಲ್ಲಿಟ್ಟುಕೊಂಡೇ ಸ್ಕ್ರಿಪ್ಟ್ ಅನ್ನು ಯೋಚಿಸಬೇಕು.

ಕಿರುಚಿತ್ರದ ವ್ಯಾಪ್ತಿಗೇ ಹೊಂದುವಂಥ ಕಥೆಯನ್ನು ಹೇಳುವುದು ಒಂದು ವಿಧವಾದರೆ, ಕಥೆಯ ಚೌಕಟ್ಟಿನ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಳ್ಳದೆ ಒಂದು ಗಟ್ಟಿಯಾದ ವಾತಾವರಣವನ್ನು ಕಟ್ಟಿಕೊಡುವ ಅಥವಾ ಸನ್ನಿವೇಶವನ್ನು ಚಿತ್ರಿಸುವ ಇನ್ನೊಂದು ವಿಧವೂ ಇದೆ. ಹಾಗೆಂದು ಇಲ್ಲಿ ಕಥೆ ಇರುವುದಿಲ್ಲವೆಂದಲ್ಲ... ಪರಿಸರದ ಮೂಲಕ ಹೇಳಹೊರಡುವುದೂ ಕಥನವನ್ನೇ ಅಲ್ಲವೇ?

ಹೀಗೆ ಒಂದು ಸನ್ನಿವೇಶವನ್ನು ಗಾಢವಾಗಿ ಚಿತ್ರಿಸುವ ಪ್ರಯತ್ನ 'ದ ಫ್ರೇ' ಕಿರುಚಿತ್ರದಲ್ಲಿದೆ. ಅತ್ತ ನಾಗರಿಕಪೂರ್ವ ಕಾಲವೂ ಅಲ್ಲದ ಇತ್ತ ಆಧುನಿಕ ಕಾಲಘಟ್ಟವೂ ಅಲ್ಲದ ದೇಶಕಾಲ ಇಲ್ಲಿದೆ. ಒಂದು ಬಿಂದುವಿನಿಂದ ಶುರುವಾಗಿ, ನಡುವಿಗೆ ತಲುಪಿ, ಪೂರ್ಣವಿರಾಮದೊಂದಿಗೆ ವಿರಮಿಸುವ ಜನಪ್ರಿಯ ವ್ಯಾಖ್ಯಾನಿತ ಕಥನ ಇಲ್ಲಿಲ್ಲ. ಆದರೆ ರಂಗೋಲಿಯನ್ನು ಬಿಡಿಸುವ ಮುನ್ನ ಹಾಕಿದ ಚುಕ್ಕಿಗಳಂತೆ ಒಂದಿಷ್ಟು ಸೂಚನೆಗಳು ಇವೆ. ಅವುಗಳನ್ನು ಜೋಡಿಸಿಕೊಳ್ಳುವ ಪ್ರಯತ್ನವನ್ನು ಪ್ರೇಕ್ಷಕನಿಗೇ ಬಿಡಲಾಗಿದೆ.

ಉಳಿವಿಗಾಗಿ ನಡೆಸುವ ಹೋರಾಟವೇ ಈ ಕಿರುಚಿತ್ರದ ಕೇಂದ್ರ. ಒಬ್ಬ ತರುಣ ಮತ್ತೊಬ್ಬ ಇಳಿವಯಸ್ಕನನ್ನು ಮುಖಕ್ಕೆ ಬಟ್ಟೆ ಕಟ್ಟಿ ಒಂದು ಅಖಾಡದಂಥ ಜಾಗದಲ್ಲಿ ಬಿಡಲಾಗುತ್ತದೆ. ಅವರಿಬ್ಬರೂ ಹೊಡೆದಾಡಿಕೊಳ್ಳಬೇಕು. ಅದು ಅಂತಿಂಥ ಹೊಡೆದಾಟವಲ್ಲ, ಜೀವನ್ಮರಣದ ಹೊಡೆದಾಟ. ಒಂದೋ ಕೊಲ್ಲಬೇಕು; ಇಲ್ಲವೇ ಸಾಯಬೇಕು. ಈ ಆಟವನ್ನು ನೋಡಲು ಅಲ್ಲಿ ಜನರು ಹುಚ್ಚೆದ್ದು ಸೇರಿದ್ದಾರೆ. ತಮ್ಮಂಥದೇ ಮನುಷ್ಯರು ಕೊಂದುಕೊಳ್ಳುತ್ತಿರುವುದು ಅವರಿಗೆ ಮೋಜಿನ ಪಂದ್ಯ.

ಈ ಹೊಡೆದಾಟವನ್ನು ಕಟ್ಟುಕೊಡುವಲ್ಲಿಯೇ ನಿರ್ದೇಶಕರು ನಿಂತುಹೋಗಿಲ್ಲ. ಅದಕ್ಕೆ ಇನ್ನೊಂದು ಸಂಕೀರ್ಣ ಆಯಾಮವನ್ನೂ ಕೊಟ್ಟಿದ್ದಾರೆ. ಅಖಾಡದಲ್ಲಿ ಸ್ಪರ್ಧಿಗಳು ಮುಖಗವಸು ತೆಗೆದಾಗ ತಿಳಿಯುತ್ತದೆ, ತಾವಿಬ್ಬರೂ ತಂದೆ ಮಕ್ಕಳೆಂದು. ಆದರೆ ಬದುಕಬೇಕೆಂದರೆ ಹೋರಾಡಲೇಬೇಕು. ಈ ಹೊಡೆದಾಟದ ನಡುವಲ್ಲಿಯೇ ಕ್ಷಿಪ್ರವಾದ ಫ್ಲ್ಯಾಷ್‌ಬ್ಯಾಕ್ ಮೂಲಕ ತಂದೆ ಮಗನ ಬಾಂಧವ್ಯವನ್ನೂ ಅನಾವರಣಗೊಳಿಸುವುದರ ಮೂಲಕ ನಿರ್ದೇಶಕರು ಉಳಿವಿನ ಹೋರಾಟವನ್ನು ಇನ್ನಷ್ಟು ಸಂಕೀರ್ಣಗೊಳಿಸಿದ್ದಾರೆ.

ಐದೇ ನಿಮಿಷದಲ್ಲಿ ಮುಗಿದುಹೋಗುವ ಈ ಕಿರುಚಿತ್ರ ಮೇಕಿಂಗ್ ಮೂಲಕವೇ ಗಮನಸೆಳೆಯುತ್ತದೆ. ಕಾಲ್ಪನಿಕ ಜಗತ್ತೊಂದನ್ನು ರೂಪಿಸಲು ಪಟ್ಟ ಪರಿಶ್ರಮ ಒಂದೊಂದು ಕ್ಷಣದಲ್ಲಿಯೂ ತೆರೆಯ ಮೇಲೆ ಕಾಣಿಸುತ್ತಿರುತ್ತದೆ. ಅಷ್ಟೇ ಸಶಕ್ತವಾದ ಸಂಗೀತ ಮತ್ತು ಛಾಯಾಗ್ರಹಣವೂ ಒಟ್ಟಾರೆ ವಾತಾವರಣ ಕಟ್ಟಿಕೊಡಲು ಬಹುಮುಖ್ಯ ಪಾತ್ರವಹಿಸಿವೆ.

ಬಾಲಿವುಡ್ ಜನಪ್ರಿಯ ಸಿನಿಮಾ ಶೈಲಿಯ ಪ್ರಭಾವ ಎದ್ದು ಕಾಣುತ್ತದೆ. ಪಾತ್ರಸೃಷ್ಟಿ, ಮೇಕಿಂಗ್, ದೃಶ್ಯಸಂಯೋಜನೆ ಎಲ್ಲವೂ ಬಾಲಿವುಡ್‌ನ ಒಂದು ಜನಪ್ರಿಯ ಸಿನಿಮಾ ಶೈಲಿಯನ್ನೇ ನೆನಪಿಸುತ್ತದೆ.

ಕ್ರೌರ್ಯವೇ ಈ ಚಿತ್ರದ ಮೂಲಸ್ಥಾಯಿ ಆದರೂ ಕ್ರೌರ್ಯವನ್ನು ಹಸಿಹಸಿಯಾಗಿ ಕಾಣಿಸುವ ಜಾಡಿಗೆ ನಿರ್ದೇಶಕರು ಬಿದ್ದಿಲ್ಲದಿರುವುದು ಗಮನಾರ್ಹ. ತಂದೆಯೇ ಮಗನನ್ನು ಇರಿವ ದೃಶ್ಯವನ್ನೂ ಅವರು ರಕ್ತದ ಕಲೆಯಿಲ್ಲದೆ, ಅದನ್ನು ನೋಡುತ್ತಿರುವ ಹುಡುಗಿಯ ಮುಖದಲ್ಲಿಯೇ ಕಾಣಿಸಿರುವುದೇ ಇದಕ್ಕೆ ಸಾಕ್ಷಿ.



**ಹೆಸರು:** ದ ಫ್ರೇ
**ನಿರ್ಮಾಣ:** ಲಿಝು ಕೌಶೌರ್
**ನಿರ್ದೇಶನ:** ದೇವಿ ಪೆನಾ
**ಛಾಯಾಗ್ರಹಣ:** ಕೈ ಡಿಕ್ಸನ್
**ಸಂಕಲನ:** ಇವಾನ್ ಗ್ರೂವರ್; ಕೆಲ್ವಿನ್ ಹಾರ್ವೆಸ್ಟ್
**ಧ್ವನಿ ವಿನ್ಯಾಸ:** ರೇವಾನ್ ಸುಲೇವಾನ್
**ತಾರಾಗಣ:** ವಿಲಿಯಮ್ ಮಾರ್ಕ್, ರಿಚರ್ಡ್ ಲೇನ್; ಜಾನೆಟ್ ಬರ್ನ್ಸ್, ಕ್ರಿಸ್ಟನ್ ಗೇರಿ

ಈ ಕಿರುಚಿತ್ರ ವೀಕ್ಷಣೆಗೆ bit.ly/3j6kDZf ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.